ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

ಓಎಸ್ 234/2022 ಪಿಡಬ್ಲ್ಯೂ-4

ದಿನಾಂಕಃ 03-07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿಯ ಪರ ಮಾನ್ಯ ಶ್ರೀ.ಪಿಎಸ್ ವಕೀಲರಿಂದಃ-**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೆನೆ. ವಾದಿ ನನಗೆ ಸುವಾರು 20 ವರ್ಷಗಳಿಂದ ಪರಿಚಯವಿದ್ದಾರೆ. 3 ನೇ ಪ್ರತಿವಾದಿಯು ನನಗೆ ಸುವಾರು 20 ವರ್ಷಗಳಿಂದ ಪರಿಚಯವಿದ್ದಾರೆ. 3 ನೇ ಪ್ರತಿವಾದಿಯು ನನಗೆ ಸಂಬಂಧಿಕರಾಗಬೇಕಿಲ್ಲ. 3 ನೇ ಪ್ರತಿವಾದಿಯು ನನ್ನನ್ನು ಕರೆದಾಗ ಅವರ ಮನೆಗೆ ಹೋಗುತ್ತಿದ್ದೇನು. 3 ನೇ ಪ್ರತಿವಾದಿಗೆ ಇಬ್ಬರು ಅಣ್ಣ ತಮ್ಮಂದಿರು ಇರುತ್ತಾರೆ. ಅವರುಗಳು ಅಂಕೇಗೌಡ ಮತ್ತು ಯಲ್ಲೇಗೌಡ ಆಗಿರುತ್ತಾರೆ. ಅವರ ಅಕ್ಕ ತಂಗಿಯರು ನನಗೆ ಗೊತ್ತಿಲ್ಲ. ಯಲ್ಲೇಗೌಡರ ಹೆಂಡತಿ 1 ನೇ ಪ್ರತಿವಾದಿಯಾಗಿರುತ್ತಾರೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ನೋಡಿರುತ್ತೆನೆ. ದಾವಾ ಆಸ್ತಿ ಯಾವ ರೀತಿ ಬಂತು ಎಂದು ನನಗೆ ಗೊತ್ತಿರುತ್ತದೆ. ದಾವಾ ಆಸ್ತಿ ಸರ್ಕಾರಿದಿಂದ ಯಲ್ಲೇಗೌಡರಿಗೆ ಬಂದಿರುತ್ತದೆ. ಯಾವುದೇ ಆಸ್ತಿಯನ್ನು ಸರ್ಕಾರವು ಯಾವುದೇ ಕುಟುಂಬಕ್ಕಾಗಿ ಕೊಟ್ಟಿರುತ್ತಾರೆಂದರೆ ಸರಿ. 3 ನೇ ಪ್ರತಿವಾದಿಗೆ ಯಲ್ಲೇಗೌಡರು ದಾವಾ ಆಸ್ತಿಯನ್ನು ದಾನ ಪತ್ರ ಬರೆದುಕೊಟ್ಟಿರುತ್ತಾರೆ. ಯಲ್ಲೇಗೌಡರು ಸ್ವಲ್ಪ ಮಧ್ಯಪಾನ ಮಾಡುತ್ತಿದ್ದರು. 3 ನೇ ಪ್ರತಿವಾದಿಗೆ ದಾವಾ ಆಸ್ತಿ ಯಾವಾಗ ದಾನ ಪತ್ರ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

2016 ನೇ ಇಸವಿಯಲ್ಲಿ ದಾನ ಪತ್ರಕ್ಕೆ ಸಾಕ್ಷಿದಾರರಾಗಿ ಬರಲು ಹೇಳಿರುತ್ತಾರೆ. ಆ ಸಂಧರ್ಬದಲ್ಲಿ ನಾನು ಊರಿನಲ್ಲಿದ್ದೆನು. ದಾನ ಪತ್ರದ ಬಗ್ಗೆ ತಿಳಿಸಿರುತ್ತಾರೆ, ಆಗ ನಾವು ಉಪ-ನೊಂದಣಾಧಿಕಾರಿ ಕಚೇರಿಗೆ ಹೋಗಿರುತ್ತೆವೆ. ನನ್ನ ಊರು ಚನ್ನೇಗೌಡನದೊಡ್ಡಿ ಆಗಿರುತ್ತದೆ. ಅಂಕೇಗೌಡ ರವರು ಮೆಣ್ಬಳಗೆರೆ ವಾಗಿಯಾಗಿರುತ್ತಾರೆ. ವಾದಿಗಳು ಗೆಜ್ಜಲಗೆರೆ ಕಾಲೋನಿಯಲ್ಲಿ ವಾಸವಾಗಿದ್ದಾರೆ. ಅವರ ಆಧಾರ್ ಪ್ರತಿ ಮತ್ತು ಇತರ ದಾಖಲೆಯನ್ನು ನಾನು ನೋಡಿಲ್ಲ. ನಾವು ಆ ದಿನ ಮದ್ಯಾಹ್ನ 12.00 ಗಂಟೆ ಸಮಯದಲ್ಲಿ ಉಪನೊಂದಣಾಧಿಕಾರಿ ಕಚೇರಿಗೆ ಬಂದಿರುತ್ತೇವೆ. 3 ನೇ ಪ್ರತಿವಾದಿಯು ವಾದಿಗಳಿಗೆ ದಾನ ಪತ್ರ ಬರೆದುಕೊಟ್ಟಿರುತ್ತಾರೆ. ಯಲ್ಲೇಗೌಡ ರವರಿಗೆ ಮಕ್ಕಳು ಇದ್ದ ಬಗ್ಗೆ ಗೊತ್ತಿರುತ್ತದೆ. ಸದರಿ ದಾನ ಪತ್ರ ಆಗುವಾಗ ನಾನು ಹೋಗಿರುವುದಿಲ್ಲ.

3 ನೇ ಪ್ರತಿವಾದಿಯು ದಾವಾ ಆಸ್ತಿ ನನ್ನ ತಮ್ಮನಿಂದ ನನಗೆ ಬಂದಿರುತ್ತದೆ. ನಾನು ವಾದಿಗಳಿಗೆ ದಾನ ಪತ್ರ ಬರೆದುಕೊಡುವುದಾಗಿ ತಿಳಿಸಿರುತ್ತೇನೆ. ದಾನ ಪತ್ರ ಆದ ನಂತರ ಯಾವಾಗ ಖಾತಾ ಬದಲಾವಣೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅಂಕೇಗೌಡರಿಗೆ ದಿ 15-10-2015 ರಲ್ಲಿ ಖಾತಾ ಬದಲಾವಣೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾನ ಪತ್ರವನ್ನು ದಿನಾಂಕ 27-01-2016 ರಂದು ಬರೆದುಕೊಟ್ಟಿದ್ದಾರೆಂದರೆ ಸರಿ. 3 ನೇ ಪ್ರತಿವಾದಿಯು ಯಲ್ಲೇಗೌಡನಿಂದ ಮಧ್ಯಪಾನ ಮಾಡಿಸಿ ಮೋಸದಿಂದ ದಾನ ಪತ್ರವನ್ನು ಬರೆಸಿಕೊಂಡಿದ್ದಾರೆಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ದಾನ ಪತ್ರ ಆಗಿರುವ ವಿಚಾರ ಯಲ್ಲೇಗೌಡರ ಹೆಂಡತಿ ಮತ್ತು ಮಕ್ಕಳಿಗೆ ಗೊತ್ತಾಗುತ್ತದೆ ಎಂಬ ಕಾರಣದಿಂದ ವಾದಿಗಳಿಗೆ ದಾನ ಪತ್ರ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಗಳ ಗುರುತಿನ ಬಗ್ಗೆ ಯಾವುದೇ ಸರ್ಕಾರಿ ದಾಖಲೆಗಳನ್ನು ನಾನು ನೋಡಿಲ್ಲ. 3 ನೇ ಪ್ರತಿವಾದಿಯು ಮೋಸದಿಂದ ಯಲ್ಲೇಗೌಡರಿಂದ ದಾನ ಪತ್ರ ಬರೆಸಿಕೊಂಡಿರುವುದರಿಂದ ಅದು ಊರ್ಜಿತವಾದ ದಾನ ಪತ್ರವಲ್ಲ ಎಂದರೆ ಸರಿಯಲ್ಲ.

ನಾನು ಸಹಿಯನ್ನು ಉಪ-ನೊಂದಣಾಧಿಕಾರಿ ಕಚೇರಿಯಲ್ಲಿ ಮಾಡಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ. ನನಗೆ ದಾನ ಪತ್ರದ ಬಗ್ಗೆ ಯಾವುದೇ ಮಾಹಿತಿ ಗೊತ್ತಿರುವುದಿಲ್ಲ, ಉಪನೊಂದಣಾಧಿಕಾರಿಗಳ ಕಚೇರಿ ಮುಂದೆ ನಾನು ನಿಂತಿದ್ದೆ, 3 ನೇ ಪ್ರತಿವಾದಿಯು ತಿಳಿಸಿದ ಕಾರಣದಿಂದ ನಾನು ಹೋಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ವಾದಿ ಮತ್ತು ಪ್ರತಿವಾದಿಯ ಕುಟುಂಬದ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನೇ ಬರೆಸಿರುತ್ತೇನೆ. ವಾದಿಯ ಮಾತು ಕೇಳಿಕೊಂಡು ಈ ಬಗ್ಗೆ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ನೇ ಪ್ರತಿವಾದಿಯ ಪರ ಮಾನ್ಯ ಶ್ರೀ.ಹೆಚ್ ಕೆಹೆಚ್ ವಕೀಲರಿಂದಃ-</u>**

ದಾವಾ ಆಸ್ತಿ ಮೂಲತಃ ಸರ್ಕಾರಕ್ಕೆ ಸೇರಿದ್ದು, ಅದು ಯಲ್ಲೇಗೌಡರಿಗೆ ಮಂಜೂರಾಗಿರುತ್ತದೆ. ಮಂಜೂರಾತಿ ಪತ್ರವನ್ನು ನಾನು ನೋಡಿರುವುದಿಲ್ಲ. ಈ ಆಸ್ತಿ ಜಯರಾಮು ರವರಿಗೆ ಮಂಜೂರಾತಿಯಾಗಿತ್ತು ಎಂದರೆ ಸರಿಯಲ್ಲ. ಜಯರಾಮು ರವರಿಂದ ರಮೇಶ್ ರವರು ಕ್ರಯಕ್ಕೆ ಪಡೆದು 1 ನೇ ಪ್ರತಿವಾದಿಗೆ ಬಾಡಿಗೆ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿ 2 ನೇ ಪ್ರತಿವಾದಿಗೆ ಸೇರಿದ ಆಸ್ತಿಯಾಗಿದ್ದರೂ ಕೂಡ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಎರಡನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,
ನ್ಯಾಯಾಧೀಶರು, ಮದ್ದೂರು.

**<u>ಸಾಕ್ಷಿಯ ಸಹಿಃ</u>**